ಅಷ್ಟು ಸುಲಭವಾಗಿ ಗೊತ್ತಾಗುತ್ತಿರಲಿಲ್ಲ. ದಾರಿಯಲ್ಲಿ ಆಗಲೇ ಮಂಜು ಹರಡಿ ಮಸುಕು ಮಸುಕಾಗಿ ನಿಂತಿದ್ದ ನೇರಳೆ ಮರ ಮತ್ತು ಆಚೆಗೆ ಒದ್ದೆಯಾಗಿ ನಿಂತಿದ್ದ ಶಂಕರ ಜೋಶಿಯವರ ಮನೆ ಮಾತ್ರ ಕಾಣಿಸಿತು ಕಮಲಜ್ಜಿಗೆ.

"ಎಲ್ಲಿ ಹೋದ ಪುಣ್ಯಾತ್ಮ? ಹೊತ್ತು ಮುಳುಗ್ಲಿಕ್ಕಾಯ್ತು. ಈಗೀಗ ಸೋಂಬೇರಿಯಾಗಿದ್ದಾನೆ ಹುಡ್ಗ, ಅಲ್ಲಿಂದ ಇಲ್ಲಿಗೆ ಬರ್ಲಿಕ್ಕೆ ಆಗುದಿಲ್ಲ ಇವನಿಗೆ, ಇನ್ನು ಮಳೆ ಬೇರೆ ಬಂದ್ರೆ ಆಯ್ತು ಕತೆ, ಇವನು ಬಂದಾಗೇ ಉಂಟು" ಎಂದು ಸಿಡುಕುತ್ತಾ, ಬೇಸರಪಡುತ್ತಾ ಮತ್ತೆ ದಾರಿಯನ್ನೊಮ್ಮೆ ತೀಕ್ಷ್ಣವಾಗಿ ನೋಡಿದಳು ಕಮಲಜ್ಜಿ. ಮಳೆ ಈಗ ಕೊಂಚ ನಿಂತಿತ್ತು. ದೂರದ ನೇರಳೆ ಮರವೇನೋ ಹಾಗೇ ಕಾಣುತ್ತಿತ್ತು, ಆದರೀಗ ಅಲ್ಲಿ ಅಂತು ಹಾರುತ್ತಾ, ಜಿಗಿಯುತ್ತಾ ಬರುತ್ತಿದ್ದ. ದೂರದಲ್ಲಿ ಆಕೃತಿಯೊಂದನ್ನು ನೋಡಿದ್ದೇ ಕಮಲಜ್ಜಿಯ ಮುದಿ ಶರೀರದಲ್ಲಿ ಜೀವ ಒಂತು. ಕಣ್ಣುಗಳು ಹೊಳಪಾದವು. ಅಷ್ಟೊತ್ತು ಮಾತಾಡದೇ ಸುಮ್ಮನಿದ್ದ ಅವಳ ಸುಕ್ಕುಗಟ್ಟಿದ್ದ ತುಟಿ ಸಂದು ಅಲುಗಲು ಶುರುವಾಯಿತು. ಕಮಲಜ್ಜಿಗೆ ಅಂತುನೇ ಜೀವ. ಕಮಲಜ್ಜಿಯ ಮನೆಯಿಂದ ಕೊಂಚ ದೂರವಿದ್ದ ಶಂಕರ ಜೋಶಿಯವರ ಹಿತ್ತಿಲು ಮನೆ ದಾಟಿದರೆ ಆಚೆ ರಾಜಾರಾಮ ಜೋಶಿಯವರ ಮನೆ. ಈ ರಾಜಾರಾಮ ಜೋಶಿಯವರ ಮಗನೇ ಅನಂತು. ಕೊಡಂಗೆ ಸರಕಾರಿ ಶಾಲೆಯಲ್ಲಿ ಐದನೇ ಕ್ಲಾಸು ಓದುತ್ತಿದ್ದ ಅನಂತು, ಶಾಲೆ ಬಿಟ್ಟ ತಕ್ಷಣ ಆಟವಾಡುವ ನೆಪ ಹೇಳಿ ಕಾಡು, ಮೇಡು ಸುತ್ತಿ ಕಮಲಜ್ಜಿಯ ಮನೆಗೆ ಬರುತ್ತಿದ್ದ. ಪುಟ್ಟ ಕಾಡಿನೊಳಗೊಂದು ದೊಡ್ಡ ಕಾಡಿನಂತಿದ್ದ ಕಮಲಜ್ಜಿಯ ಮನೆ ಅವನಿಗೊಂದು ನಿಗೂಢ ಲೋಕವಾಗಿತ್ತು. ಬೆಳಕಿದ್ದರೂ ಕತ್ತಲಂತಿರುತ್ತಿದ್ದ ಕತ್ತಲಿದ್ದರೂ ಬೆಳಕಿನಂತಿರುತ್ತಿದ್ದ ಕಮಲಜ್ಜಿಯ ಮನೆ ಅವನಿಗೆ ತನ್ನ ನಿಗೂಢ ಕತೆಗಳಲ್ಲಿ ಬರುತ್ತಿದ್ದ ಮನೆಗಳಂತೆ ಕಂಡು, ಗೊತ್ತಾಗದ ಹಾಗೇ ಅವನೊಳಗೊಂದು ಹುಮ್ಮಸ್ಸು ಕೊಡುತ್ತಿತ್ತು. ಪುಟ್ಟ ಪೋರ ಅಂತು, ಹೋದ ಮಳೆಗಾಲದಿಂದ ಈ ಮಳೆಗಾಲದವರೆಗೂ ಕಮಲಜ್ಜಿಗೆ ಏನಿಲ್ಲವೆಂದರೂ ಇನ್ನೂರು ಕತೆಗಳನ್ನು ಹೇಳಿದ್ದ. ಹಕ್ಕಿ, ಕಾಗೆ, ಕಪ್ಪೆ, ತಾನು ನೋಡಿದ್ದ ಕಾಡು ಇಂತದ್ದೇ ಕತೆಗಳನ್ನು ಮಾಡಿ ಹೇಳುತ್ತಿದ್ದ. ಶಾಲೆಯ ಪಾಠಕ್ಕಿಂತ ಹೆಚ್ಚಿನ ಅನುಭವವನ್ನು ಕಾಡಿನಲ್ಲೇ ಪಡೆಯುತ್ತಿದ್ದ ಅಂತು ವಿವಿಧ ಬಗೆಯ ಪಕ್ಷಿಗಳನ್ನು ನೋಡುತ್ತಾ, ಅವುಗಳ ಜೀವನಶೈಲಿಯನ್ನು ಗಮನಿಸುತ್ತಲೇ ಕೂರುತ್ತಿದ್ದ. ಹಾಗೆ ನೋಡಿದ್ದನ್ನು ಕಮಲಜ್ಜಿಗೆ ಕತೆ ಮಾಡಿ ಹೇಳುತ್ತ ಖುಷಿ ಅನುಭವಿಸುತ್ತಿದ್ದ. ಅವನ ನಿಜವಾದ ಕತೆಗಳನ್ನು ಕೇಳುತ್ತ ಕೇಳುತ್ತ ಕಮಲಜ್ಜಿ ಆ ಮುದಿತನದಲ್ಲಿಯೂ ತನಗೆ ತಿಳಿಯದಿದ್ದುದು ಎಷ್ಟೆಲ್ಲಾ ಉಂಟಲ್ವಾ ಎಂದು ಸೋಜಿಗಪಡುತ್ತಿದ್ದಳು. ಕಮಲಜ್ಜಿಯೂ ಕತೆ ಹೇಳುತ್ತಿದ್ದಳಾದರೂ, ಕತೆ ಹೇಳಬೇಕು ಎನ್ನುವ ಆಸೆಗಿಂತ ಅವನಿಂದ ಕತೆ ಕೇಳಬೇಕು ಅಂತಲೇ ಆಕೆ ಮೂರೊತ್ತು ಆಸೆ ಪಡುತ್ತಿದ್ದಳು. ಅವನ ಕತೆಗಳು ಅವಳಿಗೆ ಅವಳ ಬಾಲ್ಯವನ್ನು, ಯೌವ್ವನವನ್ನು, ತನ್ನ ಖುಷಿಯ ದಿನಗಳನ್ನು ನೆನಪಿಸುತ್ತಿತ್ತು. ಒಟ್ಟಾರೆ ಕಮಲಜ್ಜಿಯೂ ಅಂತುವೂ ಕಾಡಿನ ಆ ಸಾಯಂಕಾಲಗಳನ್ನು ಕತೆಗಳ ಕೌತುಕಗಳಲ್ಲಿ ಕಳೆಯುತ್ತಿದ್ದರು.

ಕಮಲಜ್ಜಿ ನೇರಳೆಪುರದ ಈ ಅರಣ್ಯವಾಸಿಯಾಗಿ 40 ವರ್ಷಗಳೇ ಆಯಿತು. ಇಲ್ಲೇ ತೋಟದ ಕೆಲಸ ಮಾಡಿಕೊಂಡು ಕುಟುಂಬದಿಂದ ಬಂದಿದ್ದ ಗದ್ದೆಯನ್ನು ನೋಡಿಕೊಂಡಿದ್ದ ಅವಳ ಗಂಡ ವಿಠಲರಾಯರು ತೀರಿ ಐದಾರು ವರ್ಷವಾಯಿತು. ಮೊದ ಮೊದಲು ಮಕ್ಕಳಾಗದ ಕೊರಗು ಕಮಲಮ್ಮನನ್ನು ಭಾರೀ ಕಾಡುತ್ತಿತ್ತಾದರೂ ಸುತ್ತಲೂ ಇರುವವರ ಪುಟ್ಟ ಪುಟ್ಟ ಮಕ್ಕಳ ಕೇಕೆ, ಚೇಷ್ಟೆಗಳಲ್ಲಿ ಸಡಗರವಾಗುತ್ತ ನೆಮ್ಮದಿಪಡುತ್ತಿದ್ದಳು. ಆದರೂ ಆಗಾಗ ನೆನಪಾಗುವ ವಿಠಲರಾಯರ ಚಿತ್ರಗಳಿಂದ ಅವಳ ಕಣ್ಣಲ್ಲಿ ಬೊಳಬೊಳನೇ ನೀರು ಬರುತ್ತಿತ್ತು. ಅವರೂ ಈಗ ಇದ್ದಿದ್ದರೆ ಬಾಳಿನ ಕಟ್ಟಕಡೆ ದಿನಗಳಲ್ಲಿ ಮೊಮ್ಮಗನಂತಹ ಅಂತುವಿನ ಜೊತೆ ಕಾಲ ಕಳೆಯುತ್ತ, ಕತೆ ಕೇಳುತ್ತ ಇದ್ದರೆ